**ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,**
**ಬನಹಟ್ಟಿ.**

ಸಿಸಿ ನಂಃ **575/2025**
ಸಿಡಬ್ಲ್ಯೂಃ**10** ಪಿಡಬ್ಲ್ಯೂಃ **6**

| | | |
|---|---|---|
| ಸಾಕ್ಷಿದಾರರ ಹೆಸರು | ಸಿದ್ದರಾಮ ಲಕ್ಷ್ಮಣ ಸೌಶುದ್ದಿ | |
| ತಂದೆಯ ಹೆಸರು | ಲಕ್ಷ್ಮಣ | |
| ವಯಸ್ಸು | 35 | |
| ಉದ್ಯೋಗ | ಒಕ್ಕಲುತನ | |
| ವಾಸಸ್ಥಳ | ಮುಗಳಖೋಡ | |

**ಸಾಕ್ಷಿಯನ್ನು ಇಂದು ದಿನಾಂಕಃ 10-11-2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ**

ದಿಃ 01-05-2025 ರಂದು ಮತ್ತ್ಯಾನಮಟ್ಟಿಗೆ ಕುಸ್ತಿ ನೋಡಲು ನನ್ನ ಮೋಟಾರ್ ಸೈಕಲ್ ಸಂಖ್ಯೆಃ KA-23-EV-1035 ನೇದ್ದರ ಮೇಲೆ ಸಂಜೆ 6 ಗಂಟೆಗೆ ಹೋಗಿದ್ದೆವು. ನಾನು ಮುಗಳಖೋಡ ಗ್ರಾಮದಲ್ಲಿರುವ ಮುತ್ತ್ಯಾನಮಟ್ಟಿ ಹತ್ತಿರ ಸದರಿ ವಾಹನವನ್ನು ನಿಲ್ಲಿಸಿದ್ದೆನು. ರಾತ್ರಿ 8 ಗಂಟೆಗೆ ನಾನು ಮರಳಿ ಬಂದು ನೋಡಿದಾಗ ನನ್ನ ಮೋಟಾರ್ ಸೈಕಲ್ ಅಲ್ಲಿ ಇರಲಿಲ್ಲ. ನಾನು ಆ ದಿನ ಸದರಿ ಮೋಟಾರ ಸೈಕಲನ್ನು ಹುಡುಕಾಡಿದರು ಸಿಕ್ಕಿರಲಿಲ್ಲ. ನಂತರ ಬನಹಟ್ಟಿ ಪೊಲೀಸ್ ಠಾಣೆಯವರು ಕಳುವಾದ 8 ದಿನಗಳ ನಂತರ ಕರೆ ಮಾಡಿ ನನ್ನ ಮೋಟಾರ ಸೈಕಲ್ ಸಿಕ್ಕಿರುವುದಾಗಿ ತಿಳಿಸಿದರು. ನಾನು ಬನಹಟ್ಟಿ ಪೊಲೀಸ್ ಠಾಣೆಗೆ ಬಂದಾಗ ಒಟ್ಟು 9 ವಾಹನಗಳು ಇದ್ದವು. ಸದರಿ ವಾಹನಗಳನ್ನು ಯಾರು ತೆಗೆದುಕೊಂಡುಹೋಗಿದ್ದರು ಮತ್ತು ಯಾರಿಗೆ ಸಿಕ್ಕಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ.

2. ಸಾಕ್ಷಿಯು ಸದರಿ ವಾಹನ ಬಿಡುಗಡೆ ಕಾಲಕ್ಕೆ ತೆಗೆದ 4 ಛಾಯಾಚಿತ್ರಗಳನ್ನು ನೋಡಿ ಗುರುತಿಸಿದ್ದು , ಸದರಿ ಛಾಯಾಚಿತ್ರಗಳನ್ನು ನಿಪಿ-11 ರಿಂದ 14 ಎಂದು ಗುರುತಿಸಲಾಯಿತು.

3. ನನ್ನನ್ನು ಈ ಕುರಿತು ಪೊಲೀಸರು ವಿಚಾರಣೆ ಮಾಡಿರುತ್ತಾರೆ.

***(ಈ ಹಂತದಲ್ಲಿ ಎಪಿಪಿ ರವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)***

**ಪಾಟೀ ಸವಾಲು. ಸರ್ಕಾರಿ ಎ ಪಿಪಿ ರವರಿಂದಃ**

ದಿಃ **07-04-2025** ರಂದು ಸಂಜೆ **4** ಗಂಟೆ ಸುಮಾರಿಗೆ ನಾನು ನಮ್ಮ ಊರಿಂದ ಮುಗಳಖೋಡ ಜಾತ್ರೆಯನ್ನು ನೋಡಲು ಹೋಗಿದ್ದೆನು ಎಂದರೆ ಸರಿ . ದಿ ಃ **12-04-2025** ರಂದು ಬನಹಟ್ಟಿ ಪೊಲೀಸರು ರವರು ನನ್ನನ್ನು ಠಾಣೆಗೆ ಕರೆಯಿಸಿ ಒಟ್ಟು **9** ವಾಹನಗನ್ನು ತರೆಸಿದ್ದರು ಎಂದರೆ ಸರಿ . ಆಗ ನನಗೆ ಪೊಲೀಸರು ಕಳು ಮಾಡಿದ ವ್ಯಕ್ತಿ ಮಹಾಂತೇಶ ಕಂಠೆಪ್ಪ ಬಿಸ್ತನ್ನವರ ರವರನ್ನು ತೋರಿಸಿದ್ದರು ಎಂದರೆ ಸರಿ . ಆಗ ಸದರಿ ಆರೋಪಿತನು ವಾಹನಗಳನ್ನು ರಬಕವಿ , ಮುಧೋಳ ಗ್ರಾಮದಿಂದ ಕಳುವು ಮಾಡಿ ಅವನ ನಾವಲಗಿ ಗ್ರಾಮದ ಸಂಬಂಧಿತರ ಮನೆಗೆ ಹೋಗುವ ದಾರಿಯ ಹತ್ತಿರ ಇರುವ ಕೆನಲ್ ಹತ್ತಿರ ಬಚ್ಚಿದ್ದನು ಎಂದು ತಿಳಿದಿರುತ್ತದೆ ಎಂದರೆ ಸರಿ .

**4.** ಸದರಿ ವಾಹನಗಳ ಕಳ್ಳತನ ಕುರಿತು ಚಾಸಾ**-1** ರವರು ತನ್ನ ಮೋಟಾರ್ ಸೈಕಲ್ ಸಹ ಇದ್ದು ಅವರು ದೂರನ್ನು ನೀಡಿರುತ್ತಾರೆ ಎಂದರೆ ಸರಿ . ನಾನು ನ್ಯಾಯಾಲಯದಿಂದ ನನ್ನಮೋಟಾರ್ ಸೈಕಲನ್ನು ಬಿಡುಗಡೆಪಡಿಸಿಕೊಂಡಿರುತ್ತೇನೆ ಈಗ ಅದು ನನ್ನ ಹತ್ತಿರ ಇರುತ್ತದೆ.

**5.** ನ್ಯಾಯಾಲಯ ಮುಂದಿರುವ ಆರೋಪಿತನ್ನು ಪೊಲೀಸ ಠಾಣೆಯಲ್ಲಿ ಕಳುವು ಮಾಡಿದ ವ್ಯಕ್ತಿಯೆಂದು ತೋರಿಸಲಾಗಿತ್ತು ಎಂದರೆ ಹೌದು.

**ಆರೋಪಿಪರ ವಕೀಲರು ಗೈರು ಹಾಜರು ಇದ್ದ ಕಾರಣ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

Sd/-

**ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**

**ಬನಹಟ್ಟಿ.**

**ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,**
**ಬನಹಟ್ಟಿ.**

**ಸಿಸಿ ನಂಃ 575/2025**
**ಸಿಡಬ್ಲ್ಯೂಃ9 ಪಿಡಬ್ಲ್ಯೂಃ 5**

| | |
|---|---|
| ಸಾಕ್ಷಿದಾರರ ಹೆಸರು | ಪರಶುರಾಮ ಗಾಡಿವಡ್ಡರ |
| ತಂದೆಯ ಹೆಸರು | ಚಂದ್ರು |
| ವಯಸ್ಸು | 20 |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಹೊಸೂರು |

**ಸಾಕ್ಷಿಯನ್ನು ಇಂದು ದಿನಾಂಕಃ 10-11-2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ**

ಚಾಸಾ-1 ಮತ್ತು 8 ನನಗೆ ಗೊತ್ತು. ದಿಃ 24-03-2025 ರಂದು ನಾನು, ಚಾಸಾ-1 ಮತ್ತು 8 ರವರು ಚಿಮ್ಮಡ ಗ್ರಾಮಕ್ಕೆ ನಮ್ಮ ನಮ್ಮ ಮೋಟಾರ್ ಸೈಕಲ್ ಮೇಲೆ ಸಂಜೆ 6.30 ರಿಂದ 7 ಗಂಟೆ ಸುಮಾರಿಗೆ ಹಾಲು ತುಂಬಿಕೊಂಡು ಬರಲು ಹೋಗಿದ್ದೆವು. ನಂತರ ನಮ್ಮ ಮೂರು ಮೋಟಾರ್ ಸೈಕಲಗಳನ್ನು ಚಿಮ್ಮಡಿನ ಗ್ರಾಮ ಪಂಚಾಯಿತಿ ಎದುರುಗಡೆ ನಿಲ್ಲಿಸಿ ಹಾಲು ತುಂಬಿಕೊಂಡು ಬರಲು ಹೋಗಿದ್ದೆವು. ಹಾಲು ತುಂಬಿಕೊಂಡು ವಾಪಸ್ಸು ಬಂದು ರಾತ್ರಿ 9 ಗಂಟೆಗೆ ನೋಡಲಾಗಿ ಚಾಸಾ-1 ರವರ ವಾಹನ ಸಂಖ್ಯೆಃ KA-48-X-9423 ಹೀರೊ ಕಂಪನಿಯ ಸ್ಲೆಂಡರ್ ಪ್ಲಸ್ ಮೋಟಾರ ಸೈಕಲ್ ಸ್ಥಳದಲ್ಲಿ ಇರಲಿಲ್ಲ. ನಂತರ ನಾನು, ಚಾಸಾ-1 ಮತ್ತು 8 ರವರು ಸದರ ಮೋಟಾರ್ ಸೈಕಲನ್ನು ಹುಡುಕಲಾಗಿ ಸದರಿ ಮೋಟಾರ್ ಸೈಕಲ್ ನಮಗೆ ಸಿಕ್ಕಿರುವುದಿಲ್ಲ. ಸದರಿ ಮೋಟಾರ್ ಸೈಕಲ ಕಳುವಾಗಿದೆ ಎಂದು ಚಾಸಾ-1 ರವರು ಬನಹಟ್ಟಿ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದರು.

2. ಈ ಕುರಿತು ಪೊಲೀಸರು ನನ್ನನ್ನು ವಿಚಾರಿಸಿರುತ್ತಾರೆ . ನಂತರ ಪೊಲೀಸರು ದಿಃ 12-04-2025 ರಂದು ಸದರಿ ಮೋಟಾರ್ ಸೈಕಲ ಸಿಕ್ಕಿರುತ್ತದೆ ಎಂದು ನನ್ನನ್ನು ಪೊಲೀಸ ಠಾಣೆಗೆ ಕರೆಸಿದರು. ನಾನು ಠಾಣೆಗೆ ಹೋದಾಗ ಪೊಲೀಸರು ನನಗೆ ಒಟ್ಟು 8 ಮೋಟಾರ್ ಸೈಕಲ್ ಚಾಸಾ-1 ರವರು ಮೋಟಾರ್ ಸೈಕಲ್ ಕಳುವಾಗಿರುತ್ತದೆ ಎಂದು ತಿಳಿಸಿರ್‌ತ್ತಾರೆ . ಆಗ ಪೊಲೀಸಠಾಣೆ ನಾನು , ಚಾಸಾ1 ಮತ್ತು 8 ರವರು ಹೋಗಿದ್ದ. ನಾವು ದಿಃ 12-04-2025 ರಂದು ಪೊಲೀಸ್

ಠಾಣೆಗೆ ಹೋದಾಗ ಪೊಲೀಸರು ಆರೋಪಿತನ್ನು ತೋರಿಸಿ ಸದರಿ ಆರೋಪಿತನ ೨ ಮೋಟಾರ್ ಸೈಕಲನ್ನು ಕಳುವು ಮಾಡಿರುತ್ತಾನೆ ಎಂದು ತಿಳಿಸಿದರು. ಪೊಲೀಸರು ಸದರಿ ಆರೋಪಿತನು ಸದರಿ ವಾಹನಗಳನ್ನು ಜತ್ , ಅಥಣಿ, ಚಿಮ್ಮಡ , ಮುಗಳಖೋಡ , ಮಹಾಲಿಂಗಪುರ , ರಬಕವಿ ಹಾಗೂ ಆಸಂಗಿಯಲ್ಲಿ ಕಳ್ಳತನ ಮಾಡಿರುತ್ತಾರೆ ಎಂದು ತಿಳಿಸಿದರು.

**3.** ಸದರಿ **8** ವಾಹನಗಳನ್ನು ನೋಡಿದರೇ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತನನ್ನು ನೋಡಿ ಗುರುತಿಸುತ್ತೇನೆ.

**4.** ಸಾಕ್ಷಿಯು ಈಗಾಗಲೇ ಗುರುತಿಸಿದ ನಿಪಿ-**8** ರಲ್ಲಿರುವ ಮೋಟಾರ ಸೈಕಲಗಳನ್ನು ತೋರಿಸಲಾಗಿ ಸಾಕ್ಷಿಯು ಸದರಿ ಮೋಟಾರ್ ಸೈಕಲಗಳು ಕಳ್ಳತನವಾಗಿದ್ದ ಮೋಟಾರ್ ಸೈಕಲ್ ಎಂದು ಗುರುತಿಸುತ್ತಾರೆ. ಈ ಕುರಿತು ಸಹ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ.

**ಆರೋಪಿಪರ ವಕೀಲರು ಗೈರು ಹಾಜರುಇದ್ದ ಕಾರಣ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

Sd/-

**ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬನಹಟ್ಟಿ.**